ಸುಮ್ಮನೆ ಒಮ್ಮೆ ನೆನಪನ್ನು ಮೀಟಿದರೆ ಸಾಕು, ಏನೆಲ್ಲವೂ ಪ್ರತ್ಯಕ್ಷ.

* * *

ಹೇಗೋ, ಎಂತೋ ಜೀವನ ಒಂದು ಹದದಲ್ಲಿ ನಡೆದುಕೊಂಡು ಹೋಗುತ್ತಿದೆ ಅಂದುಕೊಂಡಿದ್ದರೆ ಹಾಗಾಗಲು ಬಿಡಲಿಲ್ಲ ವಿಧಿ. ಮೊದಲ ಬಾರಿಗೆ ಅತ್ತೆ, ಸೊಸೆಯರ ನಡುವೆ ಸಣ್ಣ ಕಿಡಿ ಹತ್ತಿಕೊಂಡಿತು. ಎಂತಾ ವಿಚಿತ್ರ ಈ ಬದುಕು? ಸಣ್ಣಪುಟ್ಟ ಸಂಗತಿಗಳು, ಪೊಳ್ಳು ಪ್ರತಿಷ್ಠೆ, ನಗಣ್ಯವೆನಿಸುವಂತಾದ್ದೆಲ್ಲಾ ಬೆಳೆಬೆಳೆದು ಹೆಮ್ಮರವಾಗುವ ದುರಂತ. ಸೋಲೊಪ್ಪಿಕೊಳ್ಳಲು ಯಾರೂ ಮುಂದಾಗದಿರುವ ಜಿಗುಟು.

'ಬೇಡ ಕಣೇ, ನಮ್ಮನೆಗೆ ಸೇರಿದ್ದು ನಮ್ಮ ಕಣ್ಮುಂದೆ ಬೆಳೀಲಿ..' ಅಂದಳು ಅಮ್ಮ. ರಾಮಚಂದ್ರನೂ ಹೆಂಡತಿಯನ್ನು ಕೂರಿಸಿಕೊಂಡು ಬುದ್ಧಿ ಹೇಳಿದ..

'ಅಮ್ಮಂಗೆ ಬೇಜಾರು ಮಾಡ್ಬೇಡ ಕಣೇ. ಅವಳು ಬಿಡು, ನಾವಾದ್ರೂ ಸಣ್ಣ ಮಗಿನ್ನ ಬಿಟ್ಟಿರೋದು ಅಂದ್ರೆ ತಮಾಷೀನಾ?'

'ನಿಮ್ದೊಳ್ಳೇ ಕತೆ. ಅವ್ರೇನು ಅಜ್ಜ, ದೊಡ್ಡಮ್ಮ ಅಲ್ವಾ? ಅವ್ರಿಗೆ ಮೊಮ್ಮಗಳ ಮೇಲೆ ಆಸೆ ಇರಲ್ವಾ? ಕಾಯಮ್ಮಾಗಿ ಅಂತೇನಲ್ವಲ್ಲ, ಒಂದೆರಡು ತಿಂಗಳು..

ಮಗಳು ಪೂರ್ಣಿಮಾನಿಗೆ ಎದೆಹಾಲು ಬಿಡಿಸುವುದು ಅನ್ನುವುದು ಒಂದು ಹೆಳೆ. ಅಲ್ಲಿದ್ದರೆ ವಿಧಿ ಇಲ್ಲದೆ ಬೇಗ ಮರೆಯುತ್ತಾಳೆ ಎನ್ನುವ ವಾದ. 'ಎಷ್ಟು ವಯಸ್ಸಾಗಿತ್ತು ಕಂದನಿಗೆ?'

ವರ್ಷ ತುಂಬಿ ಒಂದೆರಡು ತಿಂಗಳು. ಅಷ್ಟು ಬೇಗ ಹಾಲು ಬಿಡಿಸುವುದೇ ರಾಧಮ್ಮನಿಗೆ ಇಷ್ಟವಿರಲಿಲ್ಲ. 'ಎರಡೊರ್ಷ ಆಗೋವರೆಗಾದ್ರೂ ಹಾಲು ಕುಡ್ಕಣ್ಲಿ..' ಎನ್ನುವುದು ಅವರ ವಾಂಛೆ. ಹಟ ಹಿಡಿದಳು ನಾಗಶ್ರೀ.

'ನನ್ಕೈಲಾಗಲ್ಲ, ರಾತ್ರಿಡೀ ಗೋಳು ಹುಯ್ಕಂತಾಳೆ..' ಅಂದಳು.

'ಆಯ್ತು ಬಿಡು. ನಿನ್ಕೈಲಾಗ್ದಿದ್ರೆ ನನ್ಹತ್ರ ಮಲಗಿಸ್ಕಂತೀನಿ..'

'ನಿದ್ದೇಲಿ ಉಚ್ಚೆ ಹುಯ್ಕಂತಾಳೆ ಅತ್ತೆ, ನಿಮಗೆ ದಿನಾ ಶಿವರಾತ್ರಿ ಜಾಗರಣೆ ಆಗುತ್ತೆ..'

'ಆದ್ರೆ ಆಗುತ್ತೆ. ಲೇಪಿನ ಮೇಲೆ ಒಂದು ರಬ್ಬರ್ ಶೀಟ್ ಹಾಕ್ಕಂಡ್ರೆ ಸೈ..'

'ನಾನು ಕಣ್ಣೆದುರಿಗಿದ್ರೆ ಅವಳು ಸುಮ್ನೆ ಬಿಟ್ಬಿಡ್ತಾಳಾ? ರಗಳೆ ತೆಗೀತಾಳೆ'

'ನಿಂದೊಳ್ಳೇ ಕತೆ. ಕೈ ಮಗೂಗೆ ಹಾಲು ಬಿಡಿಸೋರು ಮಗೂನೇ ಊರು ಬಿಡಿಸ್ತಾರಾ? ಎರಡು ದಿನ ಬೇವಿನೆಣ್ಣೆ ಹಚ್ಚಾ. ಆ ಕೈಂಗೆ ಆಮೇಲೆ ನಿನ್ಕಡೆ ತಿರುಗೂ ನೋಡಲ್ಲ..'

ಇನ್ನೂ ಇನ್ನೂ ವಾದ ಬೆಳೆಸಲು ಹೋಗಿರಲಿಲ್ಲ ನಾಗಶ್ರೀ. ತನ್ನ ಮಾತಿಗೆ ಪ್ರತಿ ವಾದವೊಂದು ಇರುವುದನ್ನು ಅವಳು ಕಂಡವಳೇ ಅಲ್ಲ.

'ಅತ್ತೆ ಯಾಕಿಷ್ಟು ಹಟ ಮಾಡ್ತಾರೆ ಮಾರಾಯ್ರಾ? ಅತಿ ಅತೀ ಆಯ್ತು..' ಗಂಡನ ಹತ್ತಿರ ದೂರಿಕೊಂಡಿದ್ದಳು. ಉಗುಳು ನುಂಗಿಕೊಂಡಿದ್ದ ರಾಮಚಂದ್ರ. ವಯೋಸಹಜ ಬಯಕೆಗಳನ್ನು ತಣಿಸಿ ಮನಸ್ಸನ್ನು ವಶವರ್ತಿಯಾಗಿರಿಸಿಕೊಂಡಿರುವ ಪ್ರೀತಿಯ ಮಡದಿಗೆ ಎದುರಾಡುವುದೆಂತು? ಆದರೂ ಆಡಿದ್ದ,

'ನೀನೇನು ಹಟದಲ್ಲಿ ಕಮ್ಮೀನಾ? ಅತ್ತೆಗೆ ತಕ್ಕ ಸೊಸೆ'

'ಒಂದು ಗುಟ್ಟು ಹೇಳ್ಲನ್ರೀ?'

'ಕಣೆ ಕೇಳು..'

'ಹಾಲು ಬಿಡಿಸ್ತಿದ್ಹಂಗೆ ಮಗು ನಂದಲ್ಲ, ನಿಂದು ಅಂತ ಅಮ್ಮಂಗೆ ಮಾತು ಕೊಟ್ಟಿದೀನಿ. ಇದನ್ನ ನಂಬ್ಕಂಡೇ ಅಮ್ಮ ಕಾಯಿಲೆ ಬೀಳದೆ ಗೆಲುವಾಗಿರೋದು..'

ಸಿಟ್ಟು ಬಂದಿತ್ತು ರಾಮಚಂದ್ರನಿಗೆ.

'ಅಲ್ವೇ, ನಿಂಗೇನು ಮಂಡೆ ಸಮ ಇಲ್ವಾ? ಹೊಟ್ಟೇಲಿ ಹುಟ್ಟಿದ ಮಗೂನ ಎಲ್ಲೋ ದೂರದಲ್ಲಿ ಬಿಟ್ಟಿರ್ತೀನಿ ಅಂತಿದೀಯಲ್ಲ? ಅದರ ಆಟ ಪಾಟ, ನಗು, ಚಾಷ್ಟೆ ನೋಡ್ತಿರ್ಬೇಕು ಅಂತ ಅನಿಸಲ್ವಾ ನಿಂಗೆ? ಈಗ ಬಿಟ್ರೆ ಮಗು ದೊಡ್ಡ ಆದ್ಮೇಲೆ ಈ ಸುಖ ವಾಪಸು ಸಿಗುತ್ತಾ?'

'ಇನ್ನೊಂದು ಮಗು ಆಯ್ತೂಂದ್ರೆ ಸಿಕ್ದೆ ಎಲ್ಹೋಗುತ್ತೆ?'

'ಸಿಟ್ಟು ಬರಿಸ್ಬೇಡ ನಂಗೆ. ನೀನು ಸಾವಿರ ಹೇಳು, ನಮ್ಮ ಪುಟ್ಟೀನ ಎಲ್ಲಿಗೂ ಕಳಿಸ್ಕೊಡಲ್ಲ ನಾನು..'

'ಮಾತೆತ್ತಿದ್ರೆ ಎಲ್ಲಿಗೋ ಕಳಿಸ್ತಿದೀನಿ ಅಂತ ಚಾಳಿಸ್ಬೇಡಿ. ಎಲ್ಲಿಗೆ ಕಳಿಸ್ತಿರೋದು? ನಮ್ಮಮ್ಮನ ಹತ್ರಕ್ಕೆ, ಅಪ್ಪನ ಹತ್ರಕ್ಕೆ. ನಾಳೆಂದಿನ ಅಲ್ಲಿನ ಆಸ್ತಿ ಪುಟ್ಟಿಗೂ ಸಿಗಲ್ವಾ? ಅವರೂ ಮೊಮ್ಮಗಳ ಆಟಪಾಟ ನೋಡಿ ಸಂತೋಷಪಡ್ಲಿ. ಅವಳಿಗೂ ಅಜ್ಜ, ದೊಡ್ಡಮ್ಮ ಅಂತ ಅಕರಾಸ್ಥೆ ಬೆಳೀಲಿ'

'ಮೊಂಡು ವಾದ ಮಾಡ್ತಿದ್ದಿ ನೀನು..'

'ಹಂಗೇ ಅಂದ್ಕಳಿ. ಅಲ್ಲ ಕಣ್ರೀ, ಮಗಳಿಗೆ ಮಗು ಹುಟ್ತು ಅಂದ್ರೆ ಅದು ಗಂಡನ ಪೈಕೀದೇ ಯಾಕಾಗ್ಬೇಕು? ಮಗಳ ಮನೆಯೋರಿಗೆ ಮೊಮ್ಮಕ್ಕಳ ಮೇಲೆ ಯಾವ ಹಕ್ಕೂ ಇರೋದೇ ಇಲ್ವಾ? ನನ್ನಂತೋರ ಉದಾಹರಣೆ ತಗಳ್ರೀ. ಮುಂದೆ ಅಲ್ಲಿನ ಆಸ್ತಿ ಎಲ್ಲಾ ನಮಗೇ ಸೇರುತ್ತಲ್ವಾ? ಅದಾದರೆ ಬೇಕು, ಮೊಮ್ಮಕ್ಕಳು ಮಾತ್ರಾ ಅವರ ಹತ್ರ ಬೆಳೀಬಾರ್ದು ಅಂದ್ರೆ ಅರ್ಥ ಉಂಟನ್ರೀ?'

'ಆಯ್ತೇ ಮಾರಾಯ್ತೀ, ನೀನು ಹೇಳಿದ ಹಂಗೇ ಆಗ್ಲಿ. ಅಲ್ಲಿಗೆ ಹೋಗಿ, ಬಂದು, ಮಾಡ್ತಿದ್ರೆ ತನ್ನಷ್ಟಕ್ಕೆ ಅವರ ಮೇಲೆ ಪ್ರೀತಿ ಹುಟ್ಟಲ್ವಾ? ಪ್ರೀತಿ ಹುಟ್ಬೇಕೂಂತಾದ್ರೆ ಅವರ ಹತ್ರಾನೇ ಬೆಳೀಬೇಕಾ?'

'ಅದೇ ಹೇಳ್ತಿರೋದು ನಾನು. ಪುಟ್ಟಿ ದೂರ ಇತ್ತು ಅಂದ್ಕೂಡ್ಲೆ ಇಲ್ಲಿಯ ದೊಡ್ಡಮ್ಮನ್ನ ಮರ್ತೇಬಿಡ್ತಾಳಾ? ಆಗ, ಈಗ ಬರ್ತಿರ್ತಾಳಪ್ಪಾ. ನಿಮ್ಮಮ್ಮ ಮೊಮ್ಮಗಳು ಅಂದ್ರೆ ಅವರಿಗೆ ಸೇರಿದ ಆಸ್ತಿ ಅನ್ನೋ ಥರ ತಲೇ ಮೇಲೆ ಏರಿಸಿ ಕೂರಿಸ್ಗಂಡಿದಾರೆ. ನಂಗಿಂತಾ ಅವರೇ ಹೆಚ್ಚು ಅನ್ನೋ ಥರ ಈ ವಯಸ್ಸಿಗೇ ಕುಣಿಯುತ್ತೆ ಅದು..'

'ಪಾಪುದ್ದು. ಅಷ್ಟು ಸಣ್ಣ ಮಗೂನ ಆಡ್ಕಂಬೇಡ ನೀನು. ಮಕ್ಳೂ ಸಮ, ದೇವ್ರೂ ಸಮ ಅಂತಾರೆ. ಯಾರು ಹೆಚ್ಚು ಪ್ರೀತಿ ಮಾಡ್ತಾರೋ ಅವ್ರಿಗೆ ಒಲಿದುಬಿಡ್ತಾವೆ..'

'ನಾನೇನು ಪ್ರೀತಿ ಮಾಡಲ್ವಾ? ಮಾಡೋಕೆ ಬಿಡ್ಬೇಕಲ್ಲ ನಿಮ್ಮಮ್ಮ? ಯಾವಾಗ ನೋಡಿದ್ರೂ ಸೊಂಟದಲ್ಲಿ ಚಚ್ಕೊಂಡಿರ್ತಾರೆ. ನೆಲದ ಮೇಲಿಟ್ರೆ ಇರುವೆ ಎಳ್ಕಂಡ್ಹೋಗುತ್ತೆ, ಹೊರಗೆ ಬಿಟ್ರೆ ಕಾಗೆ ಕಚ್ಕಂಡ್ಹೋಗುತ್ತೆ ಅನ್ನೋ ಥರ ಎಲ್ಲಾ ಅತೀ ಅತೀ..'

ಇದು ವಾದ ಮಾಡಿ ಜೈಸುವ ವಿಷಯ ಅಲ್ಲ ಎಂದು ರಾಮಚಂದ್ರ ತೆಪ್ಪಗಾದ. ಅವನನ್ನು ಹಣಿಯಲು ದಕ್ಕಿದ ಅವಕಾಶವನ್ನು ಕೈಜಾರಗೊಡಲಿಲ್ಲ ನಾಗಶ್ರೀ.

'ಹೇಳಿದ್ನಲ್ರೀ, ಅಮ್ಮಂಗೆ ಮಾತು ಕೊಟ್ಟಿದೀನಿ. ನಮ್ಮಮ್ಮನ್ನ ನೋಡಿದ್ರೆ ನಿಮಗೆ ಪಾಪ ಅನ್ಸಲ್ವಾ? ನನ್ನನ್ನ ಬಿಟ್ರೆ ಬೇರೆ ಯಾರಿದಾರೆ ಅವ್ರಿಗೆ? ಮೊಮ್ಮಗಳಾದ್ರೂ ತಮ್ಮ ಜೊತೆ ಬೆಳೆಯುತ್ತೆ ಅನ್ನೋ ಆಸೇಲಿ ಕಾಲ ಹಾಕ್ತಿದಾಳೆ ನಮ್ಮಮ್ಮ..' ಗದ್ಗದಳಾದಳು ನಾಗಶ್ರೀ. ಗಂಡನ ಕೊರಳು ಬಿಗಿದಪ್ಪಿ ಅವನ ಭುಜದ ಆಸರೆಯಲ್ಲಿ ತನ್ನ ಕಣ್ಣೀರನ್ನು ಮರೆಮಾಚಲು ಯತ್ನಿಸಿದಳು. ಅವಳ ಬಿಸಿಯುಸಿರು ರಾಮಚಂದ್ರನ ಕಂಠವನ್ನು ಬೆಚ್ಚಗಾಗಿಸುತ್ತಾ, ತಲೆಗೂದಲಿನ ಎಳೆಗಳು ಮುಖಕ್ಕೆ ಕಚಕುಳಿ ಕೊಡುತ್ತಾ, ಪರವಶನಾದ ರಾಮಚಂದ್ರ. ಅವಳು ಹೇಳುವುದರಲ್ಲಿ ತಪ್ಪೇನಿದೆ? ಅಲ್ಲಿಯ ಆಸ್ತಿ ಬೇಕು, ಅವರ ಸುಖ ದುಃಖ ಬೇಡ ಅಂದರೆ ಯಾವ ದೇವರು ಮೆಚ್ಚಿಯಾನು? ತನಗೆ ತನ್ನ ಅಮ್ಮನ ಮೇಲೆ ಇರುವ ಹಾಗೆ ಅವಳಿಗೂ ತನ್ನ ಹೆತ್ತವರ ಮೇಲೆ ಪ್ರೀತಿ, ಬಾಧ್ಯತೆ ಇದ್ದರೆ ತಪ್ಪಾ? ತನ್ನ ಅಮ್ಮನಿಗಾದರೆ ಇಲ್ಲೊಬ್ಬ ಮೊಮ್ಮಗ ಇದ್ದಾನೆ. ಮನೆಯಲ್ಲಿ ಜನ ಇದ್ದಾರೆ. ಅವರಿಗೆ?'

ಕನಿಕರ ಅನ್ನುವುದು ಉಕ್ಕಿ ಸುರಿಯುವಂತಾಗಿ ಮಡದಿಯ ಮುಖವನ್ನು ಎರಡೂ ಕೈಗಳಿಂದ ಮೇಲೆತ್ತಿ ಕಂಬನಿಯಿಂದ ಒದ್ದೆಯಾದ ಅವಳ ಕದಪುಗಳ ಮೇಲೆ ಪ್ರೇಮಮುದ್ರೆಯಂತೆ ಸಮ್ಮತಿಯ ಮುದ್ರೆಯನ್ನೂ ಒತ್ತಿಬಿಟ್ಟ ಪತಿರಾಯ. ಅಳುತ್ತಳುತ್ತಲೇ ನಕ್ಕಳು ನಾಗಶ್ರೀ, ಮೋಡ ಮುಸುಕಿ ಮಳೆ ಬೀಳುತ್ತಿರುವಾಗ ಸೂರ್ಯ ಮೋಡಗಳ ಮರೆಯಿಂದ ಇಣುಕಿ ನೋಡಿದಂತೆ. ಆ ರಸಗಳಿಗೆಯಲ್ಲಿ ವಿವಶನಾದ ರಾಮಚಂದ್ರನಿಗೆ ಅನಿಸಿಬಿಟ್ಟಿತು, ಇವಳಿಗೋಸ್ಕರ, ಇವಳ ಸಂತೋಷಕ್ಕೋಸ್ಕರ, ಯಾವ ತ್ಯಾಗ ಮಾಡುವುದಕ್ಕೂ ತಯಾರು ನಾನು.. ತ್ಯಾಗ ಎನ್ನುವ ಪದದಲ್ಲೇ ಅದೇನೋ ಮಹತ್ತರವಾದುದನ್ನು ಮಾಡುತ್ತಿದ್ದೇವೆ ಎನ್ನುವ ಅಹಂ ಅಡಗಿ ಕೂತಿರುತ್ತದೆಯಾ? ತಾನೇನೋ ದೊಡ್ಡಮನುಷ್ಯ ಅನಿಸಿ ಬಿಡುತ್ತದೆಯಾ? ರಾಮಚಂದ್ರನಿಗೆ ಹಾಗೆನಿಸಿದ್ದಂತೂ ಸತ್ಯ.

* * *

**(ಸಶೇಷ)**